ವ್ಯಾಪಾರಿಗಳ ಮುಖಕ್ಕೇ ಬಡಿಯುವುದುಂಟು. ಗುಡಿಯೊಳಗೆ ಇರುವುದರಿಂದ ಅಮ್ಮ ಇವರ ಹೊಡೆತದಿಂದ ಬಚಾವಾಗಿದ್ದಾಳೆ ಎನ್ನಬಹುದು.

ಹಂಪಿರೋಡಿನಲ್ಲಿ ಅಪರೂಪಕ್ಕೆ ಕೆಲವೇ ಲೌಕಿಕ ಮೆರವಣಿಗೆಗಳು ಗೋಚರಿಸುತ್ತವೆ. ಒಂದು ರಾತ್ರಿ ಎಡಸೊಕ್ಕಿನ ಇಪ್ಪತ್ತು ಹುಡುಗರು, ಎಣ್ಣೆಯೇರಿಸಿಕೊಂಡು 'ಆಕಾಶವೇ ಬೀಳಲಿ ಮೇಲೆ' ಬ್ಯಾಂಡಿನ ಲಯಕ್ಕೆ ಕುಣಿಯುತ್ತ ರಸ್ತೆ ಜಾಮ್ ಮಾಡಿದ್ದರು. ಅದೊಂದು ಮದುವೆ ದಿಬ್ಬಣ. ನವದಂಪತಿಯನ್ನು ಟ್ರ್ಯಾಕ್ಟರಿನಲ್ಲಿ ಕೂರಿಸಿ ಮೆರವಣಿಗೆ ತೆಗೆದಿದ್ದರು. ಜನ ತಮ್ಮೂರಿಗೆ ಸೊಸೆಯಾಗಿ ಬಂದಿರುವ ಮದುಮಗಳನ್ನು ಸಂಪೂರ್ಣ ನಿರ್ಲಕ್ಷಿಸಿ–ಊರಿಗೆ ಬಂದವಳು ನೀರಿಗೆ ಬಾರಳೇ? ಆಕೆ ಬಳುವಳಿಯಾಗಿ ತಂದಿರುವ ಅಲ್ಮೈರಾ, ಡ್ರೆಸಿಂಗ್ ಟೇಬಲ್, ಹಂಡೆ, ಕುಕ್ಕರು, ಮಂಚ ಇತ್ಯಾದಿ ಸರಕು ಹೇರಿದ ಟ್ರ್ಯಾಕ್ಟರಿನ ಸುತ್ತ ಚೆಲ್ಲಿದ ಪಾನಕಕ್ಕೆ ಮುತ್ತಿಕೊಂಡ ಇರುವೆಗಳಂತೆ ನೆರೆದಿದ್ದರು. ಕಣ್ಣರಳಿಸಿ ನೋಡುತ್ತಿದ್ದ ಒಬ್ಬಾಕೆ 'ಏ! ಜಗ್ಗಿ ತಂದಾಳ ಬಿಡು' ಎಂದು ಪ್ರಶಸ್ತಿ ಪತ್ರ ಕೊಟ್ಟಳು. ತವರಿಂದ ತಂದ ವಸ್ತು, ಒಡವೆ ಪ್ರದರ್ಶಿಸುವ ಹಮ್ಮು ಮದುಮಗಳ ಮುಖದಲ್ಲಿದ್ದರೆ, ಹುಡುಗಿಯ ಜತೆ ಇಷ್ಟು ವಸ್ತುಗಳನ್ನೂ ಸಂಪಾದಿಸಿಕೊಂಡು ಬಂದೆ ಎಂಬ ಹೆಮ್ಮೆ ಮದುಮಗನ ಮುಖದಲ್ಲಿತ್ತು. ಯುದ್ಧಕ್ಕೆ ಹೋಗಿ ಸೂರೆ ತಂದ ವೀರರಿಗಾದರೂ ವಿಜಯನಗರ ಕಾಲದಲ್ಲಿ ಈ ಪರಿಯ ಸಂಮಾನ ನಡೆದಿತ್ತೊ ಇಲ್ಲವೊ?

ವಿಧವಿಧದ ಕಾರವಾನು ಚಲಿಸುವುದನ್ನು ನೋಡ ಬಯಸುವವರು ಹಂಪಿರೋಡಿಗೇ ಬರಬೇಕು. ನಿದರ್ಶನಕ್ಕೆ–ಗೂಡ್ಸಿನ ಡಬ್ಬಿಗಳಂತೆ ಕಬ್ಬು ಹೇರಿದ ಸಾಲುಸಾಲು ಬಂಡಿಗಳು, ಸೈಕಲ್ಲೇ ಗೊನೆ ತಳೆದಂತಿರುವ ಎಳನೀರನ್ನು ದಬ್ಬಿಕೊಂಡು ಬರುವವರು, ಸೊಂಟಕ್ಕೆ ಡಗ್ಗ ಕಟ್ಟಿಕೊಂಡು ತಾಳ ಕುಟ್ಟುತ್ತ ನೂರಾರು ಮೈಲಿಗಳಿಂದ ವಿರೂಪಾಕ್ಷ ಗುಡಿಗೆ ಹಾಡಿಕೊಂಡು ಬಂದಿರುವ ಧ್ವಜಧಾರಿ ಭಜನಾ ತಂಡಗಳು, ಸೈಕಲ್ಲಿನ ಮೇಲೆ ಪ್ರವಾಸ ಬಂದಿರುವ ಹಳ್ಳಿಯೊಂದರ ಸಾಹಸಿ ತರುಣರು, ಹಾದಿಬದಿಯ ಫೋಟೊ ತೆಗೆಯುತ್ತ ತಿರುಗುವ ವಿದೇಶಿ ಪ್ರವಾಸಿಗರು, ಮಾಗಾಣಿ ಕೆಲಸದ ಹೆಂಗಳೆಯರು, ಗುಂಡೆಸೆತ ಆಟಗಾರರು. ಇವುಗಳಲ್ಲಿ ಹಂಪಿಸೀಮೆಯ ಖ್ಯಾತಿಗೆ ಕಾರಣವಾಗಿರುವ ಎರಡು ಕಾರವಾನುಗಳ ಬಗ್ಗೆ ಹೇಳದಿದ್ದರೆ ತಪ್ಪಾಗುತ್ತದೆ.

ಪ್ರತಿ ಮುಂಜಾನೆ ಕಳೆ ಕೀಳುವ, ನಾಟಿ ಹಾಕುವ, ಕಬ್ಬು ಕಡಿಯುವ ಮಾಗಾಣಿ ಕೆಲಸಗಳಿಗೆ ಹೊರಟ ಮಹಿಳೆಯರು ಎದುರಾಗುತ್ತಾರೆ. ಇವರು ಕೆಲಸಗಚ್ಚೆ ಹಾಕಿಕೊಂಡು ತಲೆ ಮೇಲೆ ಬುತ್ತಿಯಿಟ್ಟುಕೊಂಡು ಊರಸುದ್ದಿ ಮಾತಾಡುತ್ತ ಇರುತ್ತಾರೆ; ಶ್ರಮದಿಂದ ದಕ್ಕಿರುವ ಆರೋಗ್ಯದಿಂದ ಕಳಕಳಿಸುತ್ತ ಅಡಕೆ ದಬ್ಬೆಗಳಂತೆ ಬಳುಕುತ್ತಿರುತ್ತಾರೆ. ದುಡಿಮೆಯೇ ದಂಡಾಗಿ ಪೆರೇಡು ತೆಗೆದಂತಿರುವ ಇವರ ನಡಿಗೆ 'ನೆಲಕೆ ಕಾಲುಗಳ ಬರವಣಿಗೆ'ಯಂತೆ ಕಾಣುವುದು. ಈ ಭಾಗದ ಮನೆಗಳಲ್ಲಿ ಚೂರುಪಾರು ನೆಮ್ಮದಿ–ಸಮೃದ್ಧಿ ಅಂತ ಇದ್ದರೆ ಅದಕ್ಕೆ ಕಾರಣ ಇವರು. ಇವರ ಹಿಂದೆ, ಸೆರಗಿನ ಚುಂಗು ಹಿಡಿದು ಬರುವ ಮಗುವಿನಂತೆ, ಲುಟುಪುಟು ತಲೆಯಲ್ಲಾಡಿಸುತ್ತ ಕೊರಳಲ್ಲಿರುವ ಒಂಟಿಗೆಜ್ಜೆಯ ನಾದ ಹೊರಡಿಸುತ್ತ ಒಂಟಿಕುರಿಗಳು ಹಿಂಬಾಲಿಸುತ್ತಿರುತ್ತವೆ. ಇವು ಇವರ ಖಾಸಗಿ ಖಾತೆಯ ಠೇವಣಿ. ಇದರ ಮೇಲೆ ಗಂಡಸರ ಹಕ್ಕಿಲ್ಲ. ಇದನ್ನು ಮಾರಿ ಬಂದ ರೊಕ್ಕವನ್ನು ಇವರು ಯಾತಕ್ಕೆಲ್ಲ ಖರ್ಚು ಮಾಡುತ್ತಾರೊ ಎಂದು ಕುತೂಹಲವಾಗುತ್ತದೆ. ಇವರ ಕಿವಿ ಮೂಗಿನಲ್ಲಿ ಮಿನುಗುವ ಚೂರು ಚಿನ್ನದ ಹಿಂದೆ ಈ ಕುರಿಕಾಸು ಇರಬಹುದು ಎಂದು ಊಹಿಸುತ್ತೇನೆ.

ಜೀವಂತಿಕೆ ಮಿಡಿಯುವ ಈ ಮಹಿಳೆಯರಿಗೆ ಹೋಲಿಸಿದರೆ, ಇಲ್ಲಿನ ಹೆಚ್ಚಿನ ಗಂಡಸರು